# Rama Naamavembo

Kannada lyrics on top, English singing lyrics below

## Kannada

ರಾಮನಾಮಾವೆಂಬೊ ನಾಮವ ನೆನೆದರೆ ಭಯವಿಲ್ಲ ಮನಕೆ ||2||ಮೂರು ಲೋಕಕೆ ಕಾರಣ ಕರ್ತಾ ನಾರಾಯಣ ಜಗಕೆ ಶ್ರೀಮನ್ ನಾರಾಯಣ ಜಗಕೆ! ರಾಮನಾಮಾವೆಂಬೊ!

ಮತ್ಸ್ಯಾವತಾರವ ತಾಳಿದ ರಾಮ ವೇದವ ತರುವುದಕೆ ||2||ಬೆಟ್ಟವ ಬೆನ್ನಲಿ ಪೊತ್ತಿದ ರಾಮ ಕೂರ್ಮಾವತಾರಕ್ಕೆ! ! ರಾಮನಾಮಾವೆಂಬೊ!

ನೀರೊಳು ಮುಳುಗಿದ ಭೂಮಿಯ ಪೊತ್ತು ವರಾಹವತಾರಕ್ಕೆ ||2||ಕರುಳನು ಬಗೆದು ಮಾಲೆಯ ಧರಿಸಿದ ಪ್ರಹ್ಲಾದ ಸಲಹುದಕೆ |!ರಾಮನಾಮಾವೆಂಬೊ!

ಭೂಮಿಯದಾನವ ಬೇಡಿದ ರಾಮ ವಾಮನವತಾರಕ್ಕೆ ||2||ತಾಯಿಯ ಶಿರವನು ಕಡಿದನು ರಾಮ ಭಾರ್ಗವತಾರಕ್ಕೆ |! ರಾಮನಾಮಾವೆಂಬೊ!

ವನವಾಸವ ಮಾಡಿದ ರಾಮ ಜನಕನ ವಾಕ್ಯಕ್ಕೆ ||2||ಮಾವ ಕಂಸನ ಕೊಂದನು ಕೃಷ್ಣ ತಾಯಿಯ ಬಿಡಿಸಲಿಕ್ಕೆ!! ರಾಮನಾಮಾವೆಂಬೊ!

ಸತಿಯರ ವ್ರತಗಳ ಕೆಡಿಸಿದ ರಾಮ ತ್ರಿಪುರ ಗೆಲುವುದಕೆ ||2||ವಾಹನ ಬಿಟ್ಟು ತುರಗವನೇರಿದ ಕಲ್ಕ್ಯಾವತಾರಕ್ಕೆ!! ರಾಮನಾಮಾವೆಂಬೊ!

ಶ್ಯಾಮಲ ವರ್ಣವ ತಾಳಿದ ರಾಮ ಸಮರ್ಥನು ಜಗಕೆ ||2||ಸ್ವಾಮಿ ಶ್ರೀ ಪುರಂದರ ವಿಠ್ಠಲನು ರಾಮ ಗೋವಿಂದನು ಜಗಕೆ |!ರಾಮನಾಮಾವೆಂಬೊ!

---

## English

Raamanaamaavembo naamava nenedare bhayavilla manake | ||2|| | mooru lokake kaarana kartaa naaraayana jagake shreeman naaraayana jagake! raamanaamaavembo!

Matsyaavataarava taalida raama vedava taruvudake | ||2|| | bettava bennali pottida raama koormaavataarakke! !raamanaamaavembo!

Neerolu mulugida bhoomiya pottu varaahavataarakke | ||2|| | karulanu bagedu maaleya dharisida prahlaada salahudake |!raamanaamaavembo!

Bhoomiyadaanava bedida raama vaamanavataarakke | ||2|| | taayiya shiravanu kadidanu raama bhaargavataarakke |!raamanaamaavembo!

Vanavaasava maadida raama janakana vaakyakke | ||2|| | maava kamsana komdanu krushna taayiya bidisalikke || raamanaamaavembo!

Satiyara vratagala kedisida raama tripura geluvudake | ||2|| | vaahana bittu turagavanerida kalkyaavataarakke || raamanaamaavembo!

Shyaamala varnava taalida raama samarthanu jagake | ||2|| | svaami shree puramdara viththalanu raama govimdanu jagake |!raamanaamaavembo!